**ಕರ್ನಾಟಕ ಸರ್ಕಾರ**

**ಕೃಷಿ ಇಲಾಖೆ**

ಸಂಖ್ಯೆ: ಕೃಆ/ಆವಿ/ಇತರೆ/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 31-05-2014

**ಟಿಪ್ಪಣಿ**

**ವಿಷಯ:** ಕೆ-ಕಿಸಾನ್ ಕಾರ್ಯಕ್ರಮದ ಅನುಷ್ಠಾನ ಮತ್ತು ಪ್ರಗತಿ ಕುರಿತು.

**ಉಲ್ಲೇಖ:** ಸುತ್ತೋಲೆ ಸಂಖ್ಯೆ: ಗಯವಿ/ಕೆ-ಕಿಸಾನ್/Farmers Database/2014-15 ದಿನಾಂಕ: 28-04-2014.

\- - -

ವಿಷಯಕ್ಕೆ ಸಂಬಂಧಿಸಿದಂತೆ, (1) ಕೆ-ಕಿಸಾನ್ ಕಾರ್ಯಕ್ರಮದ ಅನುಷ್ಠಾನವನ್ನು ಈಗಾಗಲೇ ರಾಜ್ಯಾದ್ಯಂತ ಪ್ರಾರಂಭ ಮಾಡಲಾಗಿದ್ದು, ಪ್ರತಿದಿನ ಮಾಹಿತಿ ಸಂಗ್ರಹಣೆ, ಪರಿಶೀಲನೆ ಮತ್ತು ಗಣಕೀಕರಣಗೊಳಿಸುವಿಕೆಯ (Data Collection, Data Verification and Data Entry) ಕಾರ್ಯ ನಡೆಯುತ್ತಿದ್ದರೂ ಸಹ ಕೆಲವು ಜಿಲ್ಲೆಗಳ ಪ್ರಗತಿ ತೀರಾ ಕುಂಠಿತವಾಗಿರುತ್ತದೆ (ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಮಂಡ್ಯ, ರಾಮನಗರ, ಉಡುಪಿ, ಶಿವಮೊಗ್ಗ, ಯಾದಗಿರಿ). ಗಣಕೀಕರಣ ಇದೇ ರೀತಿ ಮುಂದುವರಿದರೆ ಮುಂದಿನ ಆರು ತಿಂಗಳಲ್ಲಿಯೂ ಸಹ ನಿರೀಕ್ಷಿತ ಗುರಿ ಸಾಧಿಸಲಾಗುವುದಿಲ್ಲ.

(2) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು (ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ) ಪ್ರತಿದಿನ ಸಂಗ್ರಹಣೆಯಾಗುವ ಮಾಹಿತಿಯ ಬಗ್ಗೆ ಅನಿಶ್ಚಿತ ಪರಿಶೀಲನೆಯ (random) ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸಿರುವುದಿಲ್ಲ. ಮಾಹಿತಿ ಸಂಗ್ರಹಣೆ ಮಾಡಿರುವ ಜಂಟಿ ಕೃಷಿ ನಿರ್ದೇಶಕರು / ಉಪ ಕೃಷಿ ನಿರ್ದೇಶಕರು / ಸಹಾಯಕ ಕೃಷಿ ನಿರ್ದೇಶಕರು, ಈಗಾಗಲೇ ನಿಗದಿಯಾದ ಅನುಪಾತದನ್ವಯ ಪ್ರತಿದಿನ ಅನಿಶ್ಚಿತ ಪರಿಶೀಲನೆ ಮಾಡದಿದ್ದಲ್ಲಿ, ಸರಿಯಾದ ಮಾಹಿತಿ ಲಭ್ಯವಾಗುವುದಿಲ್ಲ. ಇದರಿಂದ ಮುಂದಿನ ಅನುಷ್ಠಾನ ಕಾರ್ಯದಲ್ಲಿ ಅಡಚಣೆಗಳು / ಸಮಸ್ಯೆಗಳು ಎದುರಾಗುವ ಸಾಧ್ಯತೆ ಇರುತ್ತದೆ.

(3) ಇದೇ ರೀತಿ ಪ್ರತಿದಿನ ಸಂಗ್ರಹವಾಗುವ ಮಾಹಿತಿಯನ್ನು ಕಡ್ಡಾಯವಾಗಿ ಗಣಕೀಕೃತಗೊಳಿಸುವ ಕೆಲಸವೂ ಸಹ ಮಂದಗತಿಯಲ್ಲಿ ನಡೆಯುತ್ತಿರುವುದನ್ನು ಗಮನಿಸಲಾಗಿದೆ. ವಿಶೇಷವಾಗಿ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೀದರ್, ಬೆಳಗಾವಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಕೊಡಗು, ಮಂಡ್ಯ, ರಾಯಚೂರು, ಯಾದಗಿರಿ, ಜಿಲ್ಲೆಗಳಲ್ಲಿ ಯಾವುದೇ ಮಾಹಿತಿಯು ಇದುವರೆವಿಗೂ ಗಣಕೀಕರಣಗೊಂಡಿಲ್ಲ.

ಮೇಲಿನ ಮೂರು ಅಂಶಗಳ ಬಗ್ಗೆ ಹಾಗೂ ಕೆ-ಕಿಸಾನ್‌ಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಸಂಬಂಧಪಟ್ಟವರು ವೈಯಕ್ತಿಕ ಗಮನಹರಿಸಿ, ಯಾವುದೇ ಸಮಸ್ಯೆಗಳಿಗೆ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಸೂಚಿಸಿದೆ.

31.5.24.

ಕೃಷಿ ಆಯುಕ್ತರು

31/5

ಇವರಿಗೆ:

1. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
2. ಎಲ್ಲಾ ಅಪರ ಕೃಷಿ ನಿರ್ದೇಶಕರುಗಳು, ಕೇಂದ್ರ ಕಛೇರಿ.
   (ಸಾವಯವ ಕೃಷಿ / ಮಾನವ ಸಂಪನ್ಮೂಲ ಅಭಿವೃದ್ಧಿ / ಬೆಳೆ ಅಭಿವೃದ್ಧಿ ಮತ್ತು ಯೋಜನೆ)
3. ಎಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು, ಕೇಂದ್ರ ಕಛೇರಿ.
   (ಪರಿಕರ / ತರಬೇತಿ ಮತ್ತು ವಿಸ್ತರಣೆ / ಅಭಿವೃದ್ಧಿ)
4. ಎಲ್ಲಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರುಗಳು.
5. ಉಪ ಕೃಷಿ ನಿರ್ದೇಶಕರು (ತರಬೇತಿ), ಕೇಂದ್ರ ಕಛೇರಿ.